## ಕಥೆಳನ್ನು ಹೊತ್ತ ಕಲ್ಲುಗಳು

ಕಲ್ಲು ಎಂದು ಭಾವಿಸಿದ ಅದೆಷ್ಟೋ ಶಾಸನಗಳು ಇನ್ನೂ ಕಾಡಿನೊಳಗೆ ಕಾಣುತ್ತಿವೆ. ಶಿವಮೊಗ್ಗ ಜಿಲ್ಲೆಯ ಸಾಗರದ ಸಮೀಪದ ಹೊಸಗುಂದ ದೇವಸ್ಥಾನದ ಸುತ್ತಲಿನ ಬನದ ಸಾಲು ಶಾಸನಗಳಿವೆ. ಸುಮಾರು 600 ವರ್ಷಗಳ ಹಿಂದಿನ ಶಾಸನಗಳು ಕಾಡಿನ ಪೊದೆಗಳ ನಡುವೆ ಶಿಥಿಲ ಸ್ಥಿತಿಯಲ್ಲಿವೆ. ಇದನ್ನು ನೋಡಿದಾಕ್ಷಣ ಯಾವುದೋ ಪುರಾತನ ಕಟ್ಟಡದ ಅಡಿಪಾಯಕ್ಕೆ ಬಳಸಿದ್ದ ಕಲ್ಲುಗಳು ಎಂದು ಎನಿಸಿದರೂ, ಹತ್ತಿರದಿಂದ ನೋಡಿದರೆ ಅದೇನನ್ನೋ ಸೂಚಿಸುವ ಕೆತ್ತನೆಗಳು ಚಿಂತನೆಗೆ ಒಡ್ಡುವಂತಿವೆ.

—ಮೇಘ ಆರ್., ಸಾನಾಡಿ



## ನವಲಿಂಗ- ನವಬಸವ

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಕಾವೇರಿ ನದಿ ತೀರದ ರಾಮನಾಥಪುರ ಚತುರ್ಭುಜ ರಾಮೇಶ್ವರ ದೇವಾಲಯ ದರ್ಶನಭಾಗ್ಯ ನಮಗೊದಗಿತ್ತು. ಸುತ್ತಲೂ ವಿವಿಧ ವಿನ್ಯಾಸದ ಗಾರೆಗಚ್ಚಿನ ಎತ್ತರದ ವಿಶಾಲವಾದ ಪುರಾತನ ಪ್ರಾಕಾರವಿದೆ. ಇದಕ್ಕೆ ಹೊಂದಿಕೊಂಡಂತೆ ವಿಶೇಷವಾಗಿ ಒಂಬತ್ತು ಶಿವಲಿಂಗಗಳು. ಅಷ್ಟೂ ಲಿಂಗಗಳೆದುರಿಗೆ ಒಂಬತ್ತು ನಂದಿಗಳು ಭಕ್ತಿಪೂರ್ವಕವಾಗಿ ವಿರಾಜಮಾನವಾಗಿವೆ.

ಶ್ರೀರಾಮನಿಂದ ಚತುರ್ಭುಜ ರಾಮೇಶ್ವರ ಎಂಬ ಅಭಿನಾಮದೊಂದಿಗೆ ಲಿಂಗವನ್ನು ಮತ್ತು ಆಂಜನೇಯನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು ಎಂಬುದು ಸ್ಥಳ ಪುರಾಣವಿದೆ. ಅಗಸ್ತ್ಯರು ಲೋಪಾಮುದ್ರೆಯನ್ನು ವರಿಸಿದ್ದು ಈ ದಿವ್ಯ ಕ್ಷೇತ್ರದಲ್ಲಿ ಎಂಬ ಪ್ರತೀತಿ ಕೂಡ ಇದೆ. ಮತ್ತೊಬ್ಬ ಸೌರಭ ಮಹರ್ಷಿಗಳು ಪಟ್ಟಾಭಿರಾಮನ ಮೂರ್ತಿಯನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ.

—ವೈ. ಸತೀಶ ಕುಮಾರ, ಬಂಗಾರಪೇಟೆ





## ಕುದುರೆ ಸವಾರಿ ಶಾಸನ

ಜೈನರ ಪವಿತ್ರ ಯಾತ್ರ ಸ್ಥಳ ಹುಂಚ ಶಿವಮೊಗ್ಗದಿಂದ 58 ಕಿ.ಮೀ ದೂರದಲ್ಲಿರುವ ಒಂದು ಸಣ್ಣ ಹಳ್ಳಿ. ಕುಂದಕುಂದಾಚಾರ್ಯನ ನಂದಿಸಂಘಕ್ಕೆ ಸೇರಿದ ಸನ್ಯಾಸಿಗಳಿಂದ 7ನೇ ಶತಮಾನದಲ್ಲಿ ನಿರ್ಮಿತವಾದ ಜೈನ ಮಠವಿದೆ. ಮಠದ ಆವರಣದಲ್ಲಿ ಜನಪ್ರಿಯ ಪದ್ಮಾವತಿ ದೇವಾಲಯವಿದೆ. ಈ ದೇವಾಲಯಕ್ಕೆ ಐತಿಹಾಸಿಕ ಮಹತ್ವ ಇದೆ. ಮಠದ ಆವರಣದಲ್ಲಿ ಪಾರ್ಶ್ವನಾಥ, ಮಾರ್ತಾಂಡ ಬಸದಿ, ಜಟಿಗರಾಯ ಬಸದಿಯನ್ನು ಕಾಣಬಹುದು. ಈ ಮಠದ ಸಮೀಪ 1,300 ವರ್ಷಗಳಷ್ಟು ಹಳೆಯದಾದ ನಿತ್ಯಹರಿದ್ವರ್ಣ ಲಕ್ಕಿ ಮರವಿದೆ. ಅಲ್ಲಿ ಕುಬ್ಜನೊಬ್ಬನು ಕುದುರೆ ಸವಾರಿ ಮಾಡುತ್ತಿರುವ ಶಿಲಾ ಶಾಸನವೊಂದು ಆಕರ್ಷಕವಾಗಿದೆ.

—ಎಸ್. ಪ್ರಭಾವತಿ ಬೆಂಗಳೂರು